<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>
ಶ್ರೀರಂಗಪಟ್ಟಣ.

ಸಿ.ಸಿ.ಃ 106/2016

ಪಿ. ಡಬ್ಲ್ಯು: 14
ಸಿ. ಡಬ್ಲ್ಯು: 18

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪ್ರಕಾಶ್.ಬಿ.ಎಸ್ |
| ತಂದೆ/ಪತಿಯ ಹೆಸರು | ಃ | ಸಿದ್ದಯ್ಯ |
| ವಯಸ್ಸು | ಃ | 43 ವರ್ಷ |
| ವೃತ್ತಿ | ಃ | ಪೋಲೀಸ್ ನಿರೀಕ್ಷಕರು, ಶ್ರೀರಂಗಪಟ್ಟಣ ವೃತ್ತ |
| ವಾಸ | ಃ | ಮೈಸೂರು |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 19.10.2023

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು ದಿಃ 08.11.2013 ರಿಂದ ದಿಃ 11.04.2016 ವರೆಗೆ ಪಾಂಡವಪುರ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 26.10.2015 ರಂದು ಮುಂಜಾನೆ 00.30-04.30 ವೇಳೆಯಲ್ಲಿ ಮಾನ್ಯ ಶ್ರೀ ಶಿವಪ್ಪ ನಿವೃತ್ತ ನ್ಯಾಯಾಧೀಶರು, ಘನ ಕರ್ನಾಟಕ ಮತ್ತು ಮದ್ರಾಸ್ ಉಚ್ಚ ನ್ಯಾಯಾಲಯಗಳು ರವರ ವಾಸದ ಶ್ರೀ ಶಿವಶೈಲ ಮನೆ, ಪಟ್ಟಸೋಮನಹಳ್ಳಿ, ಪಾಂಡವಪುರದಲ್ಲಿ ದರೋಡೆ ಕೃತ್ಯ ನಡೆದಿದ್ದು ಅದರ ಬಗ್ಗೆ ಪಾಂಡಪುರ ಪೋಲೀಸ್ ಠಾಣೆಯಲ್ಲಿ ಅದೇ ದಿನ ಮೊ.ಸಂ.378/2015 ರಂತೆ ಪ್ರಕರಣ ದಾಖಲಾಗಿದ್ದು ಸದರಿ ಪ್ರಕರಣದಲ್ಲಿ ತನಿಖೆಯನ್ನು ಕೈಗೊಂಡಿದ್ದು ಖಚಿತ ಮಾಹಿತಿ ಮೇರೆಗೆ ದಿಃ 13.11.2015 ರಂದು ಪ್ರಕರಣದ 1 ನೇ ಆರೋಪಿ ನಾಗರಾಜು ಅಲಿಯಾಸ್ ಕುಪ್ಪಿ ನಾಗ ಅಲಿಯಾಸ್ ಬಾಂಬೆ ನಾಗ ಎಂಬಾತನನ್ನು ದಸ್ತಗಿರಿ ಮಾಡಿ ವಿಚಾರಣೆ ಮಾಡಿದಾಗ ನಾನು ಮತ್ತು ಇತರೆ ಆರೋಪಿತರೊಂದಿಗೆ ಸೇರಿ ಕೃತ್ಯವನ್ನು ಎಸಗಿದ್ದಾಗಿ ತಿಳಿಸಿದ್ದು ಆ ಪೈಕಿ ವಿನೋದ ಅಲಿಯಾಸ್ ವಿನಿ ಸಹ ಇದ್ದುದ್ದಾಗಿ ಹೇಳಿಕೆ ನೀಡಿದ್ದನು.

ನಂತರ ದಿಃ 30.11.2015 ರಂದು ಸದರಿ ಪಾಂಡಪುರ ಪೋಲೀಸ್ ಠಾಣೆಯ ಮೊ.ಸಂ.378/2015 ಕ್ಕೆ ಸಂಬಂಧಿಸಿದ ಇತರೆ ಆರೋಪಿತರನ್ನು ದಸ್ತಗಿರಿ ಮಾಡುವ ಸಲುವಾಗಿ ಅವರ ಬಗ್ಗೆ ಮಾಹಿತಿ ಸಂಗ್ರಹಿಸಿದಾಗ ಜಗದೀಶ್ ಅಲಿಯಾಸ್ ಜಗ, ಕೃಷ್ಣಕುಮಾರ ಅಲಿಯಾಸ್ ಗಜ, ವಿನೋದ್ ಅಲಿಯಾಸ್ ವಿನಿ, ಅಯ್ಯಪ್ಪ ಅಲಿಯಾಸ್ ಲವ ಇವರುಗಳು ನಾಗಮಂಗಲ ಕಡೆಯಿಂದ ಮಾರುತಿ ಸಿಫ್ಟ್ ಕಾರು ಸಂಃ ಕೆಎ-05-ಎಞ-6793 ರಲ್ಲಿ ಮೈಸೂರು ಕಡೆಗಾದಂತೆ

ಬರುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ನಾನು ಮತ್ತು ಸಿಬ್ಬಂದಿಗಳಾದ ಪಿಸಿ.224 ಪ್ರದೀಪ್, ಪಿಸಿ.678 ಕೃಷ್ಣೇಗೌಡ, ಪಿಸಿ.393 ರೇವಣ್ಣ ರವರನ್ನು ಜೊತೆಯಲ್ಲಿ ಕರೆದುಕೊಂಡು ಪಾಂಡವಪುರ ಕೆ.ಎಸ್.ಆರ್.ಟಿ.ಸಿ. ಬಸ್ ಡಿಪೋ ಬಳಿ ತೆರಳಿ ಕಾಯುತ್ತಿದ್ದಾಗ ಮಧ್ಯಾಹ್ನ 12.00 ಸಮಯಕ್ಕೆ ಸದರಿ ಸಿಫ್ಟ ಕಾರು ಬಂದಿದ್ದು ಅದನ್ನು ನಿಲ್ಲಿಸಿ ನೋಡಲಾಗಿ ಅದರಲ್ಲಿ ಮೇಲೆ ತಿಳಿಸಿದ ಆರೋಪಿಗಳು ಇದ್ದರು.

ನಂತರ ಆರೋಪಿತರನ್ನು ಹಾಗೂ ಕಾರನ್ನು ವಶಕ್ಕೆ ಪಡೆದು ಠಾಣೆಗೆ ಬಂದು ಕೂಲಂಕುಷವಾಗಿ ವಿಚಾರಣೆ ಮಾಡಲಾಗಿ ವಿನಿ ಅಲಿಯಾಸ್ ವಿನೋದ್ ತಾನು ನಾಗರಾಜು ಅಲಿಯಾಸ್ ಕುಪ್ಪಿ ಅಲಿಯಾಸ್ ಬಾಂಬೆ ನಾಗ, ಗಜ, ಜಗ, ಅಯ್ಯಪ್ಪ ಹಾಗೂ ಇತರೆ ಆರೋಪಿತರೊಂದಿಗೆ ಪಾಂಡವಪುರ ಪಟ್ಟಸೋಮನಹಳ್ಳಿ ಪ್ರಕರಣ ಸೇರಿದಂತೆ ಇತರೆ ಕೆಲವು ಪ್ರಕರಣಗಳಲ್ಲಿ ಭಾಗಿಯಾಗಿರುವ ಬಗ್ಗೆ ತಿಳಿಸಿದ್ದು, ಆಗಸ್ಟ್ ತಿಂಗಳಿನಲ್ಲಿ ತಾನು ಬಾಡಿಗೆಗೆ ಮೈಸೂರಿಗೆ ಬಂದಿದ್ದು ಪಾರ್ಟಿಯನ್ನು ಮೈಸೂರಿನಲ್ಲಿ ಬಿಟ್ಟು ವಾಪಸ್ಸು ಬೆಂಗಳೂರಿಗೆ ಅರಕೆರೆ ಮಾರ್ಗವಾಗಿ ಹೋಗುತ್ತಿದ್ದಾಗ ಮಧ್ಯರಾತ್ರಿ ಸುಮಾರು 01.00 ಸಮಯದಲ್ಲಿ ಮಹದೇವಪುರ ಗ್ರಾಮದ ಒಂದು ಅಂಗನವಾಡಿ ಬಳಿ ಕಾರನ್ನು ನಿಲ್ಲಿಸಿ ಸದರಿ ಅಂಗನವಾಡಿಯ ಬಾಗಿಲಿನ ಬೀಗ ಮುರಿದು ಅದರಲ್ಲಿದ್ದ ಕೆಲವು ದವಸ-ಧಾನ್ಯಗಳನ್ನು ಹಾಗೂ ಒಂದು ಇಂಡೇನ್ ಕಂಪನಿಗೆ ಸೇರಿದ ಗ್ಯಾಸ್ ಸಿಲಿಂಡರ್ ಅನ್ನು ಕಳ್ಳತನ ಮಾಡಿಕೊಂಡು ತನ್ನ ಕಾರಿನಲ್ಲಿ ಹಾಕಿಕೊಂಡು ಬೆಂಗಳೂರಿಗೆ ತೆಗೆದುಕೊಂಡು ಹೋಗಿ ದವಸ-ಧಾನ್ಯಗಳನ್ನು ರಸ್ತೆಯಲ್ಲಿ ಹೋಗುವಾಗ ಮಾರಾಟ ಮಾಡಿ ಬಂದ ಹಣವನ್ನು ಖರ್ಚು ಮಾಡಿಕೊಂಡಿದ್ದೇನೆ ಹಾಗೂ ಸದರಿ ಸಿಲಿಂಡರ್ ಅನ್ನು ತಾವುಗಳು ವಾಸ ಮಾಡಿಕೊಂಡಿರುವ ಬೆಂಗಳೂರಿನಲ್ಲಿ ರೂಂ ನಲ್ಲಿ ಇಟ್ಟುಕೊಂಡಿದ್ದೇನೆ ಹಾಗೂ ತನ್ನ ಜೊತೆ ಬಂದರೆ ಅದನ್ನು ತೋರಿಸುತ್ತೇನೆಂದು ತಿಳಿಸಿದ ಮೇರೆಗೆ ಆತನ ಸ್ವಇಚ್ಚಾ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನು.

ಬಳಿಕ ದಸ್ತಗಿರಿ ಕ್ರಮ ಜರುಗಿಸಿ ಆರೋಪಿತನನ್ನು ನನ್ನ ವಶಕ್ಕೆ ಪಡೆದು ನಂತರ ಆರೋಪಿಯಿಂದ ಕಳ್ಳತನ ಮಾಡಲು ಉಪಯೋಗಿಸಿದ್ದ ಸಿಫ್ಟ್ ಕಾರು ನಂಃ ಕೆಎ-05-ಎಇ-6793 ಅನ್ನು ಮಧ್ಯಾಹ್ನ 02.10-02.45 ರವರೆಗೆ ಪಂಚರಾದ ಎಸ್.ಎಲ್.ಸತೀಶ್ ಹಾಗೂ ಕಾಂತರಾರು ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಕಾರನ್ನು ನಮ್ಮ ಠಾಣಾ ಮಾಲುಪಟ್ಟಿಗೆ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಅದೇ ದಿನ ಆರೋಪಿ ತಾನು ಕಳ್ಳತನ ಮಾಡಿದ್ದ ಮಹದೇವಪುರ ಗ್ರಾಮದ ಅಂಗನವಾಡಿ ತೋರಿಸುತ್ತೇನೆಂದು ತಿಳಿಸಿದ ಮೇರೆಗೆ ಸಿಬ್ಬಂದಿಯವರನ್ನು ಹಾಗೂ ಪಂಚರಾದ ಮಧುಸೂದನ್ ಮತ್ತು ಕಿರಣ್ ರವರನ್ನು ಕರೆದುಕೊಂಡು ಆರೋಪಿತನ ಜೊತೆ ಹೋಗಿದ್ದು, ಆರೋಪಿ

ಮಹದೇವಪುರದ ಅಂಗನವಾಡಿ ಕೇಂದ್ರದ ಬಳಿ ನಮ್ಮನ್ನು ಕರೆದುಕೊಂಡು ಹೋಗಿ ಇದೇ ಅಂಗನವಾಡಿಯಲ್ಲಿ ದವಸ-ಧಾನ್ಯಗಳನ್ನು ಮತ್ತು ಗ್ಯಾಸ್ ಸಿಲಿಂಡರ್ ಅನ್ನು ಕಳ್ಳತನ ಮಾಡಿದ್ದಾಗಿ ತಿಳಿಸಿದ್ದು ಪಂಚರ ಸಮಕ್ಷಮ ಸಂಜೆ 05.00-5.30 ವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸದರಿ ಪ್ರಕರಣದ ಬಗ್ಗೆ ಪಿ.ಎಸ್.ಐ ಅರಕೆರೆ ಪೋಲೀಸ್ ಠಾಣೆಯವರನ್ನು ಸಂಪರ್ಕಿಸಿ ವಿಚಾರಿಸಿದಾಗ ಸದರಿ ಕಳ್ಳತನಕ್ಕೆ ಸಂಬಂಧಿಸಿದಂತೆ ಅವರ ಪೋಲೀಸ್ ಠಾಣೆ ಮೊ.ಸಂ.130/2015 ರಂತೆ ಕೇಸು ದಾಖಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ಸಿಬ್ಬಂದಿಯವರ ಬೆಂಗಾವಲಿನಲ್ಲಿ ಆರೋಪಿಯನ್ನು ಠಾಣೆಗೆ ಕರೆ ತಂದಿರುತ್ತೇನೆ.

ಅದೇ ದಿನ ಪಂಚರಾದ ಮಧೂಸೂದನ್ ಮತ್ತು ಕಿರಣ್ ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 01.12.2015 ರಂದು ಆರೋಪಿಗಳಾದ ವಿನೋದ್, ಗಜ, ಜಗ ಹಾಗೂ ಅಯ್ಯಪ್ಪ ರವರನ್ನು ವೈದ್ಯಕೀಯ ತಪಾಸಣೆ ಮಾಡಿಸಿ ಬಳಿಕ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಮತ್ತು ನ್ಯಾಯಾಲಯದ ಆದೇಶದಂತೆ ಆರೋಪಿತರನ್ನು ಪೋಲೀಸ್ ಕಸ್ಟಡಿಗೆ ಪಡೆದಿರುತ್ತೇನೆ.

ದಿಃ 02.12.2015 ರಂದು ಆರೋಪಿ ತಾನು ಕಳ್ಳತನ ಮಾಡಿದ್ದ ಗ್ಯಾಸ್ ಸಿಲಿಂಡರ್ ಹಾಗೂ ಗಜ, ಜಗ ಹಾಗೂ ಅಯ್ಯಪ್ಪರವರೊಂದಿಗೆ ಕಳವು ಮಾಡಿದ ಎರಡು ಸೋನಿ ಟಿವಿಗಳನ್ನು ತಾವು ಬೆಂಗಳೂರಿನಲ್ಲಿ ವಾಸಕ್ಕಾಗಿ ಮಾಡಿಕೊಂಡಿರುವ ರೂಂನಲ್ಲಿ ಇಟ್ಟಿದ್ದು ಅವುಗಳನ್ನು ತೋರಿಸಿ ಕೊಡುವುದಾಗಿ ತಿಳಿಸಿದ್ದು ಆರೋಪಿಗಳನ್ನು ಸೂಕ್ತ ಬೆಂಗಾವಲಿನೊಂದಿಗೆ ಪಂಚರಾದ ಬಿ.ತಮ್ಮೇಗೌಡ ಹಾಗೂ ದೇವರಾಜು ರವರನ್ನು ಕರೆದುಕೊಂಡು ಬೆಂಗಳೂರಿಗೆ ಹೋಗಿ ಅಲ್ಲಿ ಆರೋಪಿ ವಾಸ ಮಾಡಿಕೊಂಡಿದ್ದ ಸಂಜೀವ ನಗರ, ಪೀಣ್ಯ 2 ನೇ ಹಂತದಲ್ಲಿನ ರೂಂಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಕಳವು ಮಾಡಲಾಗಿದ್ದ ಗ್ಯಾಸ್ ಸಿಲಿಂಡರ್ ಮತ್ತು ಸೋನಿ ಟಿವಿಗಳನ್ನು ಇಟ್ಟಿರುವುದಾಗಿ ತಿಳಿಸಿದ್ದು ಆತ ರೂಂನ ಬೀಗವನ್ನು ತನ್ನ ಕೀ ಯಿಂದ ತೆಗೆದು ಒಳಗೆ ಹೋಗಿ ಗ್ಯಾಸ್ ಸಿಲಿಂಡರ್ ಮತ್ತು ಟಿವಿಗಳನ್ನು ತೋರಿಸಿದ ಮೇರೆಗೆ ಅವುಗಳನ್ನು ಪಂಚರ ಸಮಕ್ಷಮ ಸಂಜೆ 05.00-06.00 ವರೆಗೆ ಮಹಜರ್ ಕ್ರಮ ಜರುಗಿಸಿ ಗ್ಯಾಸ್ ಸಿಲಿಂಡರ್ ಮತ್ತು ಟಿವಿಗಳನ್ನು ತಮ್ಮ ವಶಕ್ಕೆ ಪಡೆದಿರುತ್ತೇವೆ. ಬೇರೆ ಪ್ರಕರಣದಲ್ಲಿಯೂ ಆರೋಪಿಗಳು ಭಾಗಿಯಾಗಿದ್ದ ಕಾರಣ ತನಿಖೆ ಕೈಗೊಂಡು ನಂತರ ಆರೋಪಿತರನ್ನು ಕರೆದುಕೊಂಡು ವಾಪಸ್ಸು ಠಾಣೆಗೆ ಬಂದು ಸೂಕ್ತ ಬೆಂಗಾವಲಿನೊಂದಿಗೆ ಆರೋಪಿತರನ್ನು ಲಾಕಪ್ ನಲ್ಲಿ ಇರಿಸಲಾಗಿತ್ತು. ನಂತರ ಅಮಾನತ್ತು ಪಡಿಸಿಕೊಳ್ಳಲಾದ ವಸ್ತುಗಳನ್ನು ಮಾಲು ಪಟ್ಟಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಗಿದೆ.

ದಿಃ 03.12.2015 ರಂದು ಪಂಚರಾಗಿ ಬಂದಿದ್ದ ದೇವರಾಜು ಹಾಗೂ ಬಿ.ತಮ್ಮೇಗೌಡರ ಹೇಳಿಕೆಗಳನ್ನು ಪಡೆದಿರುತ್ತೇವೆ. ದಿಃ 04.12.2015 ರಂದು ಅರಕೆರೆ ಪೋಲೀಸ್ ಠಾಣಾ ಮೊ.ಸಂ.130/2015 ರ ಪಿರ್ಯಾದಿ ಲಕ್ಷ್ಮೀ ರವರನ್ನು ಠಾಣೆಗೆ ಬರಮಾಡಿಕೊಂಡು ಆರೋಪಿಯಿಂದ ವಶಪಡಿಸಿಕೊಳ್ಳಲಾಗಿದ್ದ ಸಿಲಿಂಡರ್ ಅನ್ನು ಅವರಿಗೆ ತೋರಿಸಲಾಗಿ ಅವರು ಅದು ತಮ್ಮ ಅಂಗನವಾಡಿ ಕೇಂದ್ರದಿಂದ ಕಳ್ಳತನ ಮಾಡಿದ್ದು ಎಂದು ಗುರುತಿಸಿದ್ದ ಮೇರೆಗೆ ಸದರಿ ಲಕ್ಷ್ಮೀ ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ನಂತರ ಆರೋಪಿ ವಿನೋದ್ ಹಾಗೂ ಇತರೆ ಆರೋಪಿತರಾದ ಗಜ, ಜಗ ಹಾಗೂ ಅಯ್ಯಪ್ಪ ರವರನ್ನು ಪೋಲೀಸ್ ಕಸ್ಟಡಿಗೆ ಅವಧಿ ಮುಗಿಯಲ್ಲಿದ್ದ ಕಾರಣ ವೈದ್ಯಕೀಯ ತಪಾಸಣೆ ಮಾಡಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಆರೋಪಿತರನ್ನು ದಸ್ತಗಿರಿ ಮಾಡಿದ್ದ ಸಮಯದಲ್ಲಿ ಹಾಜರಿದ್ದ ಸಿಬ್ಬಂದಿಗಳಾದ ರೇವಣ್ಣ, ಪ್ರದೀಪ್ ಮತ್ತು ಕೃಷ್ಣೇಗೌಡರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 12.12.2015 ರಂದು ಸಾಕ್ಷಿದಾರರಾದ ರಮೇಶ್ ರವರನ್ನು ಠಾಣೆಗೆ ಬರಮಾಡಿಕೊಂಡು ಅವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ 31.12.2015 ರಂದು ಈ ಪ್ರಕರಣದ ವಿಚಾರಕ್ಕೆ ವಶಪಡಿಸಿಕೊಳ್ಳಲಾಗಿದ್ದ ಸ್ವತ್ತು ಮತ್ತು ದಾಖಲಾತಿಗಳನ್ನು ಅರಕೆರೆ ಪೋಲೀಸ್ ಠಾಣೆಗೆ ವರ್ಗಾವಣೆ ಮಾಡಲು ಮಾನ್ಯ ನ್ಯಾಯಾಲಯದ ಅನುಮತಿ ಪಡೆದು ಅದರಂತೆ ದಿಃ 02.01.2016 ರಂದು ಪಿಸಿ 224 ಪ್ರದೀಪ್ ರವರ ಮುಖಾಂತರ ಅರಕೆರೆ ಪೋಲೀಸ್ ಠಾಣಾಧಿಕಾರಿಯವರಿಗೆ ದಾಖಲಾತಿಗಳನ್ನು ಮತ್ತು ಸ್ವತ್ತನ್ನು ವರ್ಗಾಯಿಸಿರುತ್ತೇನೆ.

ಈ ಪ್ರಕರಣದ ಸಂಬಂಧ ನಾನು ದಸ್ತಗಿರಿ ಮಾಡಿದ್ದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ.6 ದಾಖಲೆಯನ್ನು ನೋಡಿ ಅದರಲ್ಲಿ ತನ್ನ ಸಹಿನೋಡಿ ಗುರುತಿಸಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.6-ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 30.11.2015 ರ ಅಮಾನತ್ತು ಮಹಜರ್ ನೋಡಿ ಗುರುತಿಸಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.7-ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 30.11.2015 ರ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.8-ಬಿ ಎಂದು ಗುರುತಿಸಲಾಯಿತು.

ಆರೋಪಿಯಿಂದ ವಶ ಪಡಿಸಿಕೊಳ್ಳಲಾದ ಕಾರನ್ನು ಮತ್ತು ಗ್ಯಾಸ್ ಸಿಲಿಂಡರ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ.4 ಮತ್ತು 5 ಭಾವಚಿತ್ರಗಳಲ್ಲಿನ ಗ್ಯಾಸ್ ಸಿಲಿಂಡರ್ ಹಾಗೂ ನಿಪಿ.8 ರಲ್ಲಿರುವ ಕಾರನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಮತ್ತು ಮಾಲುಪಟ್ಟಿಯನ್ನು ಅರಕೆರೆ ಪೋಲೀಸ್ ಠಾಣೆಗ ವರ್ಗಾವಣೆ ಮಾಡಲು ಕೋರಿದ್ದ ಪತ್ರವನ್ನು ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ.9 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.9-ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಅರಕೆರೆ ಪೋಲೀಸ್ ಠಾಣಾ ಪಿ.ಎಸ್.ಐ ರವರಿಗ ಕಳುಹಿಸಿದ್ದ ಪತ್ರದ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.10 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ</u>

ಪಾಂಡಪುರ ಪೋಲೀಸ್ ಠಾಣಾ ಮೊ.ನಂ.378/2015 ರಲ್ಲಿ ಈ ಪ್ರಕರಣದಲ್ಲಿನ ಆರೋಪಿಯೂ ಸಹ ಆರೋಪಿಯಾಗಿದ್ದನು ಎಂದರೆ ಸರಿ. ಮಹದೇವಪುರ ಅಂಗನವಾಡಿ ಹತ್ತಿರ ಮಹಜರ್ ಜರುಗಿಸುವ ಸಲುವಾಗಿ ಪಂಚರಿಗೆ ನೋಟೀಸ್ ನೀಡಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮೂಲ ಕಡತವನ್ನು ನೋಡಿ ಹೇಳಬಲ್ಲೆ ಎಂದು ನುಡಿಯುತ್ತಾರೆ. ಮಹದೇವಪುರ ಗ್ರಾಮಸ್ಥರನ್ನು ಮಹಜರ್ ಕಾರ್ಯ ನಿರ್ವಹಿಸುವ ಸಲುವಾಗಿ ಪಂಚರಾಗಿ ಬರಮಾಡಿಕೊಂಡಿರಲಿಲ್ಲ ಎಂದರೆ ಸರಿ.

ನಾನು ಈ ಕೇಸಿನ ಸಂಬಂಧ ಸ್ವತ್ತು ಮತ್ತು ಕಡತವನ್ನು ವರ್ಗಾವಣೆ ಮಾಡಿದ್ದು ತನಿಖೆ ಮಾಡಿಲ್ಲ ಎಂದರೆ ಆರೋಪಿಯಿಂದ ಸ್ವತ್ತನ್ನು ವಶಪಡಿಸಿಕೊಂಡ ಬಗ್ಗೆ ಮತ್ತು ಪಿರ್ಯಾದಿ ಈ ಪ್ರಕರಣದ ಸಂಬಂಧ ಕಳ್ಳತನವಾಗಿದ್ದ ಸಿಲಿಂಡರ್ ಅನ್ನು ಗುರುತಿಸಿದ್ದ ಬಗ್ಗೆ ಆಕೆಯ ಹೇಳಿಕೆಯನ್ನು ಪಡೆದುಕೊಂಡಿರುವ ಸಂಬಂಧ ವಿಚಾರಣೆ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿ ಯಾವುದೇ ಅಪರಾಧ ಮಾಡದಿದ್ದರೂ ಕೂಡ ಈ ಪ್ರಕರಣದಲ್ಲಿ ಬೇಕಂತಲೇ ಸಿಲುಕಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಸಲುವಾಗಿ ಬೇಕಂತಲೇ ಈ ಕೇಸನ್ನು ಸುಳ್ಳು ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ. ನಮ್ಮ ಹಿರಿಯ ಅಧಿಕಾರಿಗಳ ನಿರ್ದೇಶನದ ಮೇರೆಗೆ ಆರೋಪಿತನ ವಿರುದ್ದ ಈ ಕೇಸಿನಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮ್ಯಾಡಲಾಯಿತು.

ಸಾ.ಓ.ಹೇ.ಸ.ಒ
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,
ಶ್ರೀರಂಗಪಟ್ಟಣ.